ರಾಜ್ಯದಲ್ಲಿ ಮಹಿಳೆಯರ ಸುರಕ್ಷತೆ
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 11 (34)

ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ)

ಅ) ಮಹಿಳೆಯರ ಮತ್ತು ಮಕ್ಕಳ ಸುರಕ್ಷತೆ ಭದ್ರತೆಗಾಗಿ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳಾವುವು; ಅವುಗಳನ್ನು ಜಾರಿಗೊಳಿಸುವಲ್ಲಿ ಲೋಪದೋಷಗಳು ಉಂಟಾಗದಂತೆ ನಿಗಾವಹಿಸಲಾಗುತ್ತಿದೆಯೇ:

ಆ) ಮಹಿಳೆಯರು ಮತ್ತು ಮಕ್ಕಳ ಮೇಲೆ ನಡೆಯುತ್ತಿರುವ ಅತ್ಯಾಚಾರ ಮತ್ತು ಲೈಂಗಿಕ ಕಿರುಕುಳಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಕೈಗೊಂಡ ಕ್ರಮಗಳೇನು; ಕಳೆದ 2 ವರ್ಷಗಳಲ್ಲಿ ಈ ಕುರಿತಾದ ಎಷ್ಟು ಪ್ರಕರಣಗಳು ಇಲಾಖಾ ವ್ಯಾಪ್ತಿಯಲ್ಲಿ ದಾಖಲಾಗಿವೆ ಮತ್ತು ಇತ್ಯರ್ಥಪಡಿಸಿವೆ:

ಇ) ಉದ್ಯೋಗಸ್ಥ ಮಹಿಳೆಯರು ಮತ್ತು ವಿದ್ಯಾರ್ಥಿನಿಯರು ಅತ್ಯಾಚಾರಕ್ಕೆ ಸುಲಭವಾಗಿ ಗುರಿಯಾಗುವುದನ್ನು ತಪ್ಪಿಸಲು ರಾಜ್ಯ ಸರ್ಕಾರವು ಮಾರ್ಗದರ್ಶಿ ಸೂತ್ರಗಳನ್ನೇನಾದರೂ ರೂಪಿಸಿದೆಯೆ; ಹಾಗಿದ್ದಲ್ಲಿ, ಈ ಕುರಿತು ವಿವರ ನೀಡುವುದು?

ಶ್ರೀ ಕಳಕಪ್ಪ ಜಿ. ಬಂಡಿ (ಮಕ್ಕಳ ಅಭಿವೃದ್ಧಿ ಸಚಿವರು)

ಅ) ಒಳಾಡಳಿತ ಇಲಾಖೆ ಮುಖಾಂತರ: ಮಹಿಳೆಯರ ಮತ್ತು ಮಕ್ಕಳ ಸುರಕ್ಷಿತ ಭದ್ರತೆಗಾಗಿ ಪೊಲೀಸ್ ಇಲಾಖೆಯ ವತಿಯಿಂದ ಈ ಕೆಳಕಂಡ ಯೋಜನೆಗಳನ್ನು ಕೈಗೊಳ್ಳಲಾಗಿದೆ.

1) ಮಹಿಳೆಯರ ಮತ್ತು ಮಕ್ಕಳ ಭದ್ರತೆಗಾಗಿ ರಾಜ್ಯದ ಎಲ್ಲಾ ಪೊಲೀಸ್ ಠಾಣೆಗಳಲ್ಲಿ ಮಹಿಳಾ ಮತ್ತು ಮಕ್ಕಳ ಡೆಸ್ಕ್‌ಗಳನ್ನು ಪ್ರಾರಂಭಿಸಲಾಗಿದ್ದು, ನೊಂದ ಮಹಿಳೆಯರ ಅಹವಾಲುಗಳನ್ನು ಸ್ವೀಕರಿಸಲು ಮತ್ತು ಅವರಿಗೆ ಆಪ್ತ

ಸಲಹೆಗಳನ್ನು ನೀಡಲು (ಕೌನ್ಸಿಲಿಂಗ್) ಮಹಿಳಾ ಕುಂದುಕೊರತೆ ಘಟವನ್ನು ತೆರೆದಿದ್ದು, ಈ ಘಟಕದ ಮುಖಾಂತರ ಮಹಿಳೆಯರ ಕುಂದುಕೊರತೆಗಳನ್ನು ಪರಿಹರಿಸಲಾಗುತ್ತಿದೆ.

2) ಮಹಿಳೆಯರ ಮತ್ತು ಮಕ್ಕಳ ಸುರಕ್ಷತೆ ಭದ್ರತೆಗಾಗಿ ಮಹಿಳೆಯರ ಸಹಾಯವಾಣಿ ಸ್ಥಾಪಿಸಲಾಗಿದೆ.

3) ಮಕ್ಕಳ ಸುರಕ್ಷತೆ ಬಗ್ಗೆ ರಾಜ್ಯದಲ್ಲಿ ನಗರ/ಜಿಲ್ಲಾಮಟ್ಟ/ಉಪವಿಭಾಗ/ವೃತ್ತ ಮತ್ತು ಪೊಲೀಸ್ ಠಾಣಾ ಮಟ್ಟದಲ್ಲಿ ಮಕ್ಕಳ ಬಾಲ ಆರಕ್ಷಕ ಘಟಕವನ್ನು ತೆರೆದಿದ್ದು, ಮಕ್ಕಳ ಸಂರಕ್ಷಣಾಧಿಕಾರಿಗಳನ್ನು ನೇಮಕ ಮಾಡಲಾಗಿರುತ್ತೆ. ಇವುಗಳನ್ನು ಜಾರಿಗೊಳಿಸುವಲ್ಲಿ ಲೋಪಗಳು ಉಂಟಾಗದಂತೆ ನಿಗಾ ವಹಿಸಲಾಗುತ್ತಿದೆ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಮುಖಾಂತರ:

1) **ಸಾಂತ್ವನ–** ಅತ್ಯಾಚಾರ, ವರದಕ್ಷಿಣೆ ಕಿರುಕುಳ, ಲೈಂಗಿಕ ಕಿರುಕುಳ, ಕೌಟುಂಬಿಕ ಹಿಂಸೆ ಮುಂತಾದ ದೌರ್ಜನ್ಯಕ್ಕೆ ಒಳಗಾದ ಮಹಿಳೆಯರು ದೈಹಿಕವಾಗಿ, ಮಾನಸಿಕವಾಗಿ ಹಿಂಸೆಗೊಳಗಾಗುತ್ತಿದ್ದು. ಈ ಮಹಿಳೆಯರಿಗೆ ಸಾಂತ್ವನ ನೀಡಲು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ರಾಜ್ಯದಲ್ಲಿ 172 ಸಾಂತ್ವನ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ.
2) **ಬಾಲಕಿರ ವಸತಿ ನಿಲಯ–** ಗ್ರಾಮಾಂತರ ಪ್ರದೇಶದ ಹೆಣ್ಣುಮಕ್ಕಳು ಹತ್ತಿರದ ಪಟ್ಟಣಗಳಲ್ಲಿ ವಿದ್ಯಾಭ್ಯಾಸವನ್ನು ಮುಂದುವರೆಸಲು ಅನುಕೂವಾಗುವಂತೆ 44 ಬಾಲಕಿಯರ ವಸತಿ ನಿಲಯಗಳನ್ನು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಸಲಾಗುತ್ತಿದೆ.
3) **ಉದ್ಯೋಗಸ್ಥ ಮಹಿಳೆಯರ ವಸತಿಗೃಹ–** ಉದ್ಯೋಗಾವಕಾಶಕ್ಕಾಗಿ ಪಟ್ಟಣಗಳಿಗೆ ಬರುವ ಉದ್ಯೋಗಸ್ಥ ಮಹಿಳೆಯರಿಗೆ ಸುರಕ್ಷಿತ ವಸತಿ ಸೌಲಭ್ಯ ಒದಗಿಸಲು 66 ಉದ್ಯೋಗಸ್ಥ ಮಹಿಳೆಯರ ವಸತಿಗೃಹಗಳನ್ನು ಸ್ವಯಂ ಸಂಸ್ಥೆಗಳ ಮೂಲಕ ನಡೆಸಲಾಗುತ್ತಿದೆ.

4) **ಕೌಟುಂಬಿಕ ಹಿಂಸೆಯಿಂದ ಮಹಿಳೆಯರ ಸಂರಕ್ಷಣಾ ಕಾಯ್ದೆ 2005 ನಿಯಮ 2006–** ಕೌಟುಂಬಿಕ ಸಂಬಂಧದಿಂದ ದೈಹಿಕ, ಲೈಂಗಿಕ, ಆರ್ಥಿಕ, ಭಾವನಾತ್ಮಕ ಹಿಂಸೆಗಳನ್ನು ಅನುಭವಿಸುತ್ತಿರುವ ಮಹಿಳೆಯನ್ನು ಈ ಕಾಯ್ದೆಯಡಿಯಲ್ಲಿ ಸಂರಕ್ಷಿಸುವುದು ಕಾಯ್ದೆಯ ಮುಖ್ಯ ಉದ್ದೇಶವಾಗಿದೆ. ರಾಜ್ಯಾದ್ಯಂತ 30 ಜಿಲ್ಲೆಗಳಲ್ಲಿಯೂ ಉಪನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮತ್ತು 138 ತಾಲ್ಲೂಕುಗಳಲ್ಲಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರನ್ನು ಹೆಚ್ಚಿನ ಪ್ರಭಾರದಲ್ಲಿ ಕಾಯ್ದೆಯಡಿ ಸಂರಕ್ಷಣಾಧಿಕಾರಿಗಳೆಂದು ನೇಮಿಸಲಾಗಿದ್ದು, ಉಳಿದ 47 ತಾಲ್ಲೂಕುಗಳಲ್ಲಿ ಪ್ರತ್ಯೇಕ ಸಂರಕ್ಷಣಾಧಿಕಾರಿಗಳನ್ನು ನೇಮಿಸಲಾಗಿದೆ. ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಜಿಲ್ಲಾ ಮಟ್ಟದಲ್ಲಿ ಮತ್ತು ಹೋಬಳಿ ಮಟ್ಟದಲ್ಲಿ ಜಾಗೃತಿ ಶಿಬಿರಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಕಾಯ್ದೆಯ ಅನುಷ್ಠಾನದಲ್ಲಿ ಸಹಕರಿಸಲು 116 ಸೇವಾ ಸಂಸ್ಥೆಗಳನ್ನು ಗುರುತಿಸಲಾಗಿದೆ. ಮಹಿಳೆಯರಿಗೆ ತಾತ್ಕಾಲಿಕ ಆಶ್ರಯ ನೀಡಲು ಸ್ವಯಂ ಸೇವಾ ಸಂಸ್ಥೆಗಳನ್ನು ರಕ್ಷಣಾ ಗೃಹಗಳೆಂದು ಗುರುತಿಸಲಾಗಿದೆ.

ಸದರಿ ಯೋಜನೆಗಳಿಗೆ ರಾಜ್ಯ ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಹಾಗೂ ತಾಲ್ಲೂಕು ಮಟ್ಟದಲ್ಲಿ ಮೇಲ್ವಿಚಾರಣೆ ಮತ್ತು ಉಸ್ತುವಾರಿ ಮಾಡಲು ಸಮಿತಿಗಳನ್ನು ರಚಿಸಲಾಗಿದ್ದು, 3 ತಿಂಗಳಿಗೊಮ್ಮೆ ಸಭೆ ನಡೆಸಿ, ಪರಿಶೀಲಿಸಲಾಗುತ್ತಿದೆ.

5.ಭಾಗ್ಯಲಕ್ಷ್ಮಿ– ಹೆಣ್ಣು ಮಗುವಿನ ಬಗ್ಗೆ ಇರುವ ಕಳಕಳಿ, ಸಾಮಾಜಿಕ ಪ್ರಜ್ಞೆ ವ್ಯಕ್ತಪಡಿಸಲು ಮತ್ತು ಹೆಣ್ಣು ಮಗುವಿನ ವಿರುದ್ಧ ಸಮಾಜದಲ್ಲಿರುವ ಧೋರಣೆಯನ್ನು ಬದಲಿಸಲು, ಹೆಣ್ಣು ಮಗುವನ್ನು ಆರ್ಥಿಕ ಸ್ವಾವಲಂಬಿಯನ್ನಾಗಿ ಮಾಡಲು ರಾಜ್ಯ ಸರ್ಕಾರವು 2006–07 ನೇ ಸಾಲಿನಲ್ಲಿ ಭಾಗ್ಯಲಕ್ಷ್ಮಿ ಎಂಬ ಹೊಸ ಕಲ್ಯಾಣ ಯೋಜನೆಯನ್ನು ರೂಪಿಸಿದೆ. ಈ

ಯೋಜನೆಯಡಿ 01.04.2006 ರಿಂದ ಬಡತನ ರೇಖೆಗಿಂತ ಕೆಳಗಿರುವ ಕುಟುಂಬದಲ್ಲಿ ಜನಿಸಿದ 2 ಹೆಣ್ಣು ಮಕ್ಕಳಿಗೆ ನಿಶ್ಚಿತ ಠೇವಣಿ ರೂ. 10.000/– ಗಳನ್ನು ಹೂಡಿ ಮಗುವಿನ 18 ವರ್ಷ ಪೂರ್ಣಗೊಂಡ ನಂತರ ಬಡ್ಡಿ ಸಮೇತವಾಗಿ ಪರಿಪಕ್ವ ಮೊತ್ತ ಕ್ರಮವಾಗಿ ಮೊದಲನೇ ಹಾಗೂ ಎರಡನೇ ಮಗುವಿಗೆ ರೂ. 34,751/– ಮತ್ತು 40,619/– ನೀಡಲಾಗುವುದು. 01.08.2008ರ ನಂತರ ಜನಿಸಿದ ಮೊದಲನೇ ಮಗುವಿನ ರೂ. 19,300/–ಗಳನ್ನು ಹಾಗೂ 2ನೇ ಮಗುವಿನ ರೂ. 18,350/– ಗಳನ್ನು ಭಾರತೀಯ ಜೀವ ವಿಮಾ ನಿಗಮದಲ್ಲಿ ಠೇವಣಿ ಹೂಡಲಾಗುವುದು. ಪರಿಪಕ್ವ ಮೊತ್ತ ರೂ. 1.00 ಲಕ್ಷ ಲಭಿಸಲಿದೆ.

ಮಕ್ಕಳ ಸುರಕ್ಷತೆ ಭದ್ರತೆಗಾಗಿ ಸರ್ಕಾರವು ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿಯ ಮೂಲಕ ಸಮಗ್ರ ಮಕ್ಕಳ ರಕ್ಷಣಾ ಯೋಜನೆಯನ್ನು ಜಾರಿಗೊಳಿಸುತ್ತಿದೆ. ಈ ಯೋಜನೆಯಡಿಯಲ್ಲಿ ಬಾಲನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ 2000, ತಿದ್ದುಪಡಿ ಕಾಯ್ದೆ 2006, 2011 ನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಈ ಕಾಯ್ದೆ ಅಡಿಯಲ್ಲಿ

(1) ರಕ್ಷಣೆ ಮತ್ತು ಪೋಷಣೆಯ ಅಗತ್ಯವಿರುವ ಮಕ್ಕಳ ಪ್ರಕರಣಗಳನ್ನು ಪರಿಶೀಲಿಸಲು ಪ್ರತಿ ಜಿಲ್ಲೆಯಲ್ಲಿ ಮಕ್ಕಳ ಕಲ್ಯಾಣ ಸಮಿತಿಗಳನ್ನು ರಚಿಸಲಾಗಿದೆ. ರಕ್ಷಣೆ ಮತ್ತು ಪೋಷಣೆ ಅಗತ್ಯವಿರುವ ಮಕ್ಕಳಿಗೆ ಈ ಸಮಿತಿಗಳ ಮೂಲಕ ಪುನರ್ ವಸತಿ, ಸಮಾಲೋಚನೆ ಮತ್ತು ಇತರೆ ಸೇವೆಗಳನ್ನು ಒದಗಿಸಲಾಗುತ್ತಿದೆ. ಇಂಥಹ ಮಕ್ಕಳಿಗಾಗಿ ಸರ್ಕಾರದಿಂದ 56 ಬಾಲಮಂದಿರಗಳನ್ನು ಹಾಗೂ ಸ್ವಯಂ ಸೇವಾ ಸಂಸ್ಥೆಗಳ ಮೂಲಕ 43 ಅರ್ಹ ಸಂಸ್ಥೆಗಳನ್ನು ನಡೆಸಲಾಗುತ್ತಿದೆ.

(2) ಕಾನೂನು ಸಂಘರ್ಷಕ್ಕೆ ಒಳಗಾದ ಮಕ್ಕಳ ಪ್ರಕರಣಗಳನ್ನು ಪರಿಶೀಲಿಸಲು ಪ್ರತಿ ಜಿಲ್ಲೆಯಲ್ಲಿ ಬಾಲನ್ಯಾಯ ಮಂಡಳಿಗಳನ್ನು ಸ್ಥಾಪಿಸಿದ್ದು, ಇಂತಹ ಮಕ್ಕಳಿಗಾಗಿ 12 ವೀಕ್ಷಣಾಲಯಗಳು ಮತ್ತು 4 ವೀಕ್ಷಣಾಲಯ ಹಾಗೂ ವಿಶೇಷ ಗೃಹಗಳನ್ನು ಸ್ಥಾಪಿಸಿ ಮೇಲ್ವಿಚಾರಣೆ ಮಾಡಲಾಗುತ್ತಿದೆ.

(3) ನಗರ ಮತ್ತು ಅರೆನಗರ ಪ್ರದೇಶಗಳಲ್ಲಿ ರಕ್ಷಣೆ ಮತ್ತು ಪೋಷಣೆ ಅಗತ್ಯವಿರುವ ಮಕ್ಕಳಿಗಾಗಿ 8 ಜಿಲ್ಲೆಗಳಲ್ಲಿ 23 ತೆರೆದ ತಂಗುದಾಣಗಳನ್ನು 14 ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಸಮಗ್ರ ಮಕ್ಕಳ ರಕ್ಷಣಾ ಯೋಜನೆಯಡಿ ಮಂಜೂರು ಮಾಡಲಾಗಿದೆ.

(4) ಸಮಗ್ರ ಮಕ್ಕಳ ರಕ್ಷಣೆ ಯೋಜನೆಯಡಿ ಅನಾಥ, ನಿರ್ಗತಿಕ ಮತ್ತು ತ್ಯಜಿಸಲ್ಪಟ್ಟ ಮಕ್ಕಳ ಪುನರ್‌ವಸತಿಗಾಗಿ ದತ್ತು ಕಾರ್ಯಕ್ರಮವನ್ನು ಜಾರಿಗೊಳಿಸಲಾಗುತ್ತಿದೆ. ರಾಜ್ಯದಲ್ಲಿ 6 ವಿದೇಶಿ ಮತ್ತು 29 ಸ್ವದೇಶಿ ವಿಶೇಷ ದತ್ತು ಎಜೆನ್ಸಿಗಳಿಗೆ ಪರವಾನಗಿ ನೀಡಲಾಗಿದ್ದು ಕಾರ್ಯ ನಿರ್ವಹಿಸುತ್ತಿದೆ.

ಸಮಗ್ರ ಮಕ್ಕಳ ರಕ್ಷಣಾ ಯೋಜನೆಯ ಅನುಷ್ಠಾನಕ್ಕಾಗಿ ಜಿಲ್ಲಾಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ 11 ಅಧಿಕಾರಿ/ಸಿಬ್ಬಂದಿಗಳನ್ನು ಒಳಗೊಂಡ ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳನ್ನು ಪ್ರತಿ ಜಿಲ್ಲೆಯಲ್ಲಿ ಸ್ಥಾಪಿಸಲಾಗಿದೆ. ಈ ಘಟಕಗಳು ಸದರಿ ಯೋಜನೆಯ ಅನುಷ್ಠಾನವನ್ನು ಜಿಲ್ಲಾ ಮಟ್ಟದಲ್ಲಿ ಅತೀ ಹತ್ತಿರದಿಂದ ಮೇಲ್ವಿಚಾರಣೆ ಮಾಡುತ್ತಲಿದೆ.

ಆ) ಒಳಾಡಳಿತ ಇಲಾಖೆಯ ಮುಖಾಂತರ ಮಹಿಳೆಯರು ಮತ್ತು ಮಕ್ಕಳ ಮೇಲೆ ನಡೆಯುತ್ತಿರುವ ಅತ್ಯಾಚಾರ ಮತ್ತು ಲೈಂಗಿಕ ಕಿರುಕುಳಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

1) ಮಹಿಳೆಯರು ಒಬ್ಬಂಟಿಯಾಗಿ ವಿಹಾರಕ್ಕಾಗಲಿ ಅಥವಾ ಇನ್ನಾವುದೇ ಕೆಲಸದ ನಿಮಿತ್ತ ನಿರ್ಜನ ಪ್ರದೇಶಗಳಲ್ಲಿ ಸಂಚರಿಸದಂತೆ ಸಾರ್ವಜನಿಕರಿಗೆ ತಿಳುವಳಿಕೆ ನೀಡಲಾಗುತ್ತಿದೆ.

2) ರಾತ್ರಿ 11.00 ಗಂಟೆಯಿಂದ ಬೆಳಗಿನ ಜಾವ 4–00 ಗಂಟೆಯವರೆಗಿನ ಅವಧಿಯಲ್ಲಿ ಅನುಮಾನಾಸ್ಪದವಾಗಿ ಓಡಾಡುವ ವಾಹನಗಳನ್ನು ಅದರಲ್ಲೂ ಪುರುಷರು ಮಾತ್ರ ಪ್ರಯಾಣಿಸುವ ಟೆಂಪೋ ಟ್ರಾವೆಲ್, ಟಾಟಾ ಸುಮೋ, ಇಂಡಿಕಾ, ಓಮ್ನಿ, ಕ್ವಾಲಿಸ್ ಇಂತಹ ಪ್ರಮುಖ ವಾಹನಗಳನ್ನು ತೀವ್ರ ತಪಾಸಣೆಗೊಳಪಡಿಸುವಂತೆ ಸೂಚಿಸಿದೆ.

3) ಪೊಲೀಸ್ ಠಾಣಾ ಮಟ್ಟದಲ್ಲಿ ನಾಗರೀಕರ ಸಭೆ ಕರೆದು, ವಾಸದ ಮನೆ, ಅಂಗಡಿಗಳ ಮುಂಭಾಗ ಹಾಗೂ ಇತರೆ ಸ್ಥಳಗಳಲ್ಲಿ ಅನುಮಾನಾಸ್ಪದವಾಗಿ ಓಡಾಡುವ ವ್ಯಕ್ತಿಗಳ ಬಗ್ಗೆ ಹಾಗೂ ಅವರ ಚಲನ ವಲನಗಳ ಬಗ್ಗೆ ತೀವ್ರ ನಿಗಾ ವಹಿಸಿ, ಇಂತಹ ದುಷ್ಟ ಕೃತ್ಯಗಳಿಗೆ ತೊಡಗುವ ಸಂಭವವಿದ್ದಲ್ಲಿ ಕೂಡಲೇ ಸ್ಥಳೀಯ ಪೊಲೀಸ್ ಠಾಣೆಗೆ ಮಾಹಿತಿ ನೀಡುವಂತೆ ಸೂಕ್ತ ತಿಳುವಳಿಕೆ ನೀಡಲಾಗುತ್ತಿದೆ.

4) ಸಂಬಂಧಿಸಿದ ಸರಹದ್ದು ಪೊಲೀಸ್ ಅಧಿಕಾರಿಗಳಿಗೆ ಶಾಲೆ, ಕಾಲೇಜು ಹಾಗು ಹಾಸ್ಟೆಲ್‌ಗಳಿಗೆ ಭೇಟಿ ನೀಡಿ ಮಹಿಳೆಯರ ಮತ್ತು ಮಕ್ಕಳ ಸುರಕ್ಷತೆಯ ಬಗ್ಗೆ ತೆಗೆದುಕೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳ ಕುರಿತು ಅರಿವು ಮೂಡಿಸಲಾಗುತ್ತಿದೆ.

5) ಪ್ರತಿ ತಿಂಗಳು ನಡೆಯುವ ಅಪರಾಧ ಸಭೆಗಳಲ್ಲಿ ಈ ಬಗ್ಗೆ ಸೂಕ್ತ ಮಾರ್ಗದರ್ಶನಗಳನ್ನು ಅಧಿಕಾರಿಗಳಿಗೆ ನೀಡಲಾಗುತ್ತಿದೆ. ಭದ್ರತೆಯ ವಿಷಯದಲ್ಲಿ ಲೋಪ ದೋಷಗಳು ಕಂಡುಬಂದಲ್ಲಿ ಅಂತಹ ಅಧಿಕಾರಿ/ಸಿಬ್ಬಂದಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

6) ಸ್ಥಾಯಿ ಆದೇಶ ಸಂಖ್ಯೆ–920ರ ಪ್ರಕಾರ ಸಾರ್ವಜನಿಕರ ಸಭೆ ನಡೆಸಿ, ಇತ್ತೀಚಿನ ದಿನಗಳಲ್ಲಿ ಹುಡುಗಿ ಕಾಣೆಯಾದ, ವಿವಾಹ ಪೂರ್ವ ಪರಸ್ಪರ ಸಮ್ಮತಿಯಿಂದ ದೈಹಿಕ ಸಂಬಂಧ ಹೊಂದಿದಂತಹ ಸಂದರ್ಭಗಳಲ್ಲಿ, ಅಪ್ರಾಪ್ತ ಹುಡುಗಿ ಪತ್ತೆಯಾದಾಗ ಮತ್ತು ಪ್ರೀತಿಸಿದವರ ನಡುವೆ

ಭಿನ್ನಾಭಿಪ್ರಾಯ ಬಂದಾಗ ಸಾಮಾನ್ಯವಾಗಿ ಅತ್ಯಾಚಾರದ ಆರೋಪದಡಿ ಪ್ರಕರಣಗಳಲ್ಲಿ ವರದಿಯಾಗುತ್ತಿದೆ. ಆದ್ದರಿಂದ ಇಂತಹ ಪ್ರಕರಣಗಳ ವಿಷಯಗಳಲ್ಲಿ ಜಾಗೃತಿ ಉಂಟು ಮಾಡುವ ನಿಟ್ಟಿನಲ್ಲಿ ಸೂಕ್ತ ತಿಳುವಳಿಕೆ ನೀಡಲಾಗುತ್ತಿದೆ ಹಾಗೂ ಸಂಭವಿಸಿರುವ ಇಂತಹ ಪ್ರಕರಣಗಳ ಬಗ್ಗೆ ಮಾಹಿತಿಯನ್ನು ನೀಡಿ, ಭವಿಷ್ಯದಲ್ಲಿ ಇಂತಹ ಪ್ರಕರಣಗಳು ಸಂಭವಿಸದಂತೆ ಸೂಕ್ತ ಅರಿವು ಮತ್ತು ಜಾಗೃತಿ ಮೂಡಿಸಲಾಗುತ್ತಿದೆ.

ಕಳೆದ 2 ವರ್ಷಗಳಲ್ಲಿ ಮಹಿಳೆಯರು ಮತ್ತು ಮಕ್ಕಳ ಮೇಲೆ ನಡೆದ ಅತ್ಯಾಚಾರ ಮತ್ತು ಲೈಂಗಿಕ ಕಿರುಕುಳಕ್ಕೆ ಸಂಬಂಧಿಸಿದಂತೆ:–

2011 ರಲ್ಲಿ 636 ಅತ್ಯಾಚಾರ, 2608 ಲೈಂಗಿಕ ಕಿರುಕುಳಗಳ ಪ್ರಕರಣಗಳು, ಮತ್ತು 2012 ರಲ್ಲಿ 621 ಅತ್ಯಾಚಾರ, 2978 ಲೈಂಗಿಕ ಕಿರುಕುಳ ಪ್ರಕರಣಗಳು ದಾಖಲಾಗಿರುತ್ತದೆ. ಈ ಪ್ರಕರಣಗಳ ಇತ್ಯರ್ಥದ ಅಂಕಿಅಂಶಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಮುಖಾಂತರ: ಸಾಂತ್ವನ ಯೋಜನೆಯಡಿ ಅತ್ಯಾಚಾರಕ್ಕೊಳಗಾದ ಮಹಿಳೆಯರಿಗೆ ಜಿಲ್ಲಾ ಸಮಿತಿಯ ಶಿಫಾರಸ್ಸಿಗನುಗುಣವಾಗಿ ಆರ್ಥಿಕ ಪರಿಹಾರ ನೀಡಲಾಗುತ್ತಿದೆ.

ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯಗಳನ್ನು ನಿಯಂತ್ರಿಸಲು ಸರ್ಕಾರವು ಹಲವು ಕ್ರಮಗಳನ್ನು ಕೈಗೊಂಡಿದೆ.

1) ಕೇಂದ್ರ ಸರ್ಕಾರವು ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯವನ್ನು ನಿಯಂತ್ರಿಸಲು Protection of Children from Sexual Offences Act 2012(ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆ 2012) ಕಾಯ್ದೆಯನ್ನು 19 ಜೂನ್ 2012 ರಂದು ಜಾರಿಗೆ ತಂದಿರುತ್ತದೆ. ಈ ಬಗ್ಗೆ ಕೇಂದ್ರ ಸರ್ಕಾರವು ನವೆಂಬರ್ 14, 2012 ರಂದು ಸದರಿ ಕಾಯ್ದೆಗೆ ನಿಯಮಗಳನ್ನು ಜಾರಿಗೆ ತಂದಿರುತ್ತದೆ.
2) ಮಕ್ಕಳ ಹಕ್ಕುಗಳ ರಕ್ಷಣಾ ಕಾಯಿದೆ 2005 ಅನುಷ್ಠಾನಕ್ಕಾಗಿ ಹಾಗೂ Protection of Children from Sexual

Offences Act 2012 (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೇ ಕಾಯ್ದೆ 2012) ಕಾಯ್ದೆಯ ಮೇಲ್ವಿಚಾರಣೆಗಾಗಿ ರಾಜ್ಯಮಕ್ಕಳ ಹಕ್ಕುಗಳ ರಕ್ಷಣಾ ಆಯೋಗವನ್ನು ದಿ: 27–9–2007ರಂದು ರಚಿಸಲಾಗಿದೆ. ಹಾಗೂ ಸದರಿ ಆಯೋಗವು 2009ರಂದು ಕಾರ್ಯ ನಿರ್ವಹಿಸುತ್ತಿದೆ.

3) ಮಕ್ಕಳ ಮೇಲಿನ ದೌರ್ಜನ್ಯ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥಪಡಿಸಲು ಬೆಂಗಳೂರು ನಗರದಲ್ಲಿ ಮಕ್ಕಳ ವಿಶೇಷ ನ್ಯಾಯಾಲಯವನ್ನು ಸ್ಥಾಪಿಸಿದೆ ಹಾಗೂ ನ್ಯಾಯಾಧೀಶರ ಮತ್ತು ಸತ್ರ ನ್ಯಾಯಾಲಯವು ಇಂತಹ ಪ್ರಕರಣಗಳನ್ನು ವಿಚಾರಣೆ ಮಾಡಲು ಆಧೇಶ ನೀಡಲಾಗಿದೆ.

4) ಲೈಂಗಿಕ ದೌರ್ಜನ್ಯಕ್ಕೆ ಒಳಗಾದವರಿಗೆ ಪರಿಹಾರ ಯೋಜನೆಯನ್ನು ರೂಪಿಸಿ ಗೃಹ ಇಲಾಖೆ (ಅಪರಾಧ) ಇವರಿಂದ ದಿ: 22–2–2012 ರಂದು ಅಧಿಸೂಚನೆ ಹೊರಡಿಸಲಾಗಿರುತ್ತದೆ.

5) Protection of Children from Sexual Offences Act 2012 (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೇ ಕಾಯ್ದೆ 2012) ಕಾಯ್ದೆಯ ಬಗ್ಗೆ ಪ್ರಚಾರ ಮತ್ತು ಅರಿವು ಮೂಡಿಸುವ ಕಾರ್ಯಕ್ರಮವನ್ನು ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ ಅಡಿಯಲ್ಲಿ ರಚಿತವಾದ ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳ ಮೂಲಕ ನಿರಂತರವಾಗಿ ಹಮ್ಮಿಕೊಳ್ಳಲಾಗುವುದು.

6) ಜಿಲ್ಲೆಗಳಲ್ಲಿ ಮಕ್ಕಳ ವಿಶೇಷ ಪೊಲೀಸ್ ಘಟಕಗಳನ್ನು ಸ್ಥಾಪಿಸಲಾಗಿದೆ. ಹಾಗೂ ಪ್ರತಿ ಠಾಣೆಯಲ್ಲಿ ಇಬ್ಬರು ಪೊಲೀಸ್ ಅಧಿಕಾರಿಗಳನ್ನು ಮಕ್ಕಳ ಕಲ್ಯಾಣಾಧಿಕಾರಿಗಳನ್ನು ನೇಮಕ ಮಾಡಲಾಗಿದೆ.

7) ಸಮಗ್ರ ಮಕ್ಕಳ ರಕ್ಷಣಾ ಯೋಜನೆಯಡಿ ಲೈಂಗಿಕ ದೌರ್ಜನ್ಯಕ್ಕೆ ಒಳಗಾದ ಮಕ್ಕಳಿಗೆ ಅವಶ್ಯ ವಿರುವ ಸೇವೆಗಳನ್ನು ನೀಡಲು

ಬೆಂಗಳೂರು ನಗರದ 7 ಪ್ರಮುಖ ಆಸ್ಪತ್ರೆಗಳಲ್ಲಿ ಚೆಲ್ಡ್ ರೆಸ್‌ಪಾನ್ಸ್ ಘಟಕಗಳನ್ನು ತೆರೆಯಲಾಗಿದೆ. ಹಾಗೂ ಅಲ್ಲಿನ ಸಿಬ್ಬಂದಿಗಳಿಗೆ ಈ ಬಗ್ಗೆ ತರಬೇತಿಯನ್ನು ಸಹ ನೀಡಲಾಗಿದೆ. ಈ ಸೇವೆಯನ್ನು ಗುಲ್ಬರ್ಗ, ಮಂಗಳೂರು, ಹುಬ್ಬಳ್ಳಿ, ಮೈಸೂರು, ಬಳ್ಳಾರಿ, ರಾಯಚೂರು, ದಾವಣಗೆರೆ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಸಹ ವಿಸ್ತರಿಸಲು ಅಗತ್ಯ ಕ್ರಮ ತೆಗೆದು ಕೊಳ್ಳಲಾಗಿದೆ.

8) ಸಮಗ್ರ ಮಕ್ಕಳ ರಕ್ಷಣಾ ಯೋಜನೆಯಡಿ ಕರ್ನಾಟಕ ಮಕ್ಕಳ ನಿಧಿಯನ್ನು ಸ್ಥಾಪಿಸಲಾಗಿದ್ದು ಅವಶ್ಯಕತೆ ಅನುಸರಿಸಿ ಮಕ್ಕಳಿಗೆ ಈ ನಿಧಿಯಿಂದ ಪರಿಹಾರ ಕಲ್ಪಿಸಲಾಗುವುದು.

ಇ) ಒಳಾಡಳಿತ ಇಲಾಖೆಯ ಮುಖಾಂತರ:1) ಉದ್ಯೋಗಸ್ಥ ಮಹಿಳೆಯರು ಮತ್ತು ವಿದ್ಯಾರ್ಥಿನಿಯರು ಅತ್ಯಾಚಾರಕ್ಕೆ ಸುಲಭವಾಗಿ ಗುರಿಯಾಗುವುದನ್ನು ತಪ್ಪಿಸಲು ಕಛೇರಿಗಳಲ್ಲಿ ಮಹಿಳಾ ಕುಂದುಕೊರತೆ ವಿಭಾಗ ಪ್ರತ್ಯೇಕವಾಗಿ ಸ್ಥಾಪಿಸಲು ಹಾಗೂ ಒಬ್ಬ ಮಹಿಳೆಯನ್ನು ಸದಸ್ಯರನ್ನಾಗಿ ನೇಮಕ ಮಾಡಿ, ಮಹಿಳೆಯರ ಕುಂದುಕೊರತೆ ಗಳನ್ನು ನಿವಾರಿಸಲು ಮತ್ತು ದೂರುಗಳನ್ನು ಸ್ವೀಕರಿಸಿ, ಕಾನೂನು ರೀತಿ ಕ್ರಮಗಳನ್ನು ಕೈಗೊಳ್ಳಲು ಅಗತ್ಯ ಸೂಚನೆಗಳನ್ನು ನೀಡಲಾಗುತ್ತಿದೆ.

2) ಪ್ರತಿ ತಿಂಗಳು ನಡೆಸುವ ಅಪರಾಧ ಸಭೆಗಳಲ್ಲಿ ವಿಚಾರಣೆ ಮಾಡಲು ಹಾಗೂ ಅತ್ಯಾಚಾರ ಮತ್ತು ಲೈಂಗಿಕ ಕಿರುಕುಳಕ್ಕೆ ಬಲಿಯಾಗದಂತೆ ತಿಳುವಳಿಕೆ ನೀಡಲಾಗುತ್ತಿದೆ.

3) ನಗರ/ ಜಿಲ್ಲಾ ಮಟ್ಟದಲ್ಲಿ ಎನ್.ಜಿ.ಓ. ಕೇಂದ್ರಗಳ ಸಹಯೋಗದೊಂದಿಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಸೂಚನೆಗಳನ್ನು ನೀಡಲಾಗುತ್ತಿದೆ.

4) ಉದ್ಯೋಗಸ್ಥ ಮಹಿಳೆಯರು ಮತ್ತು ವಿದ್ಯಾರ್ಥಿನಿಯರು ಅತ್ಯಾಚಾರಕ್ಕೆ ಸುಲಭವಾಗಿ ಗುರಿಯಾಗುವುದನ್ನು ತಪ್ಪಿಸಲು ಕಛೇರಿಗಳಲ್ಲಿ ಸಿ.ಸಿ.

ಕ್ಯಾಮರವನ್ನು ಮತ್ತು ವಾಹನಗಳಿಗೆ ಜಿಪಿಆರ್‌ಎಸ್ ಅಳವಡಿಸಲು ಸಂ. ಕಂಪನಿ/ ವಿದ್ಯಾ ಸಂಸ್ಥೆಗಳ ಮುಖ್ಯಸ್ಥರಿಗೆ ಸೂಚಿಸಲಾಗಿದೆ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಮುಖಾಂತರ; ಅವಿವಾಹಿತೆ, ವಿಧವೆ, ಪರಿತ್ಯಕ್ತೆ, ವಿವಾಹ ವಿಚ್ಛೇದನ ಆಗಿರುವ ಮತ್ತು ಮದುವೆ ಆಗಿದ್ದು ಗಂಡ ಬೇರೆ ಊರಿನಲ್ಲಿರುವಂತಹ ಉದ್ಯೋಗಸ್ಥ ಮಹಿಳೆಯರಿಗೆ ಹಾಗೂ ಒಂದು ವರ್ಷ ಅವಧಿಯ ವೃತ್ತಿ ಆಧಾರಿತ ಕೋರ್ಸಿನಲ್ಲಿ ತರಬೇತಿ ಪಡೆಯುವ ಮಹಿಳೆಯರಿಗೆ ಸುರಕ್ಷಿತ ವಸತಿ ಸೌಲಭ್ಯ ಒದಗಿಸಲು 66 ಉದ್ಯೋಗಸ್ಥ ಮಹಿಳೆಯರ ವಸತಿಗೃಹಗಳನ್ನು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಸಲಾಗುತ್ತಿದೆ.

ಗ್ರಾಮಾಂತರ ಪ್ರದೇಶದ ಹೆಣ್ಣುಮಕ್ಕಳು ಹತ್ತಿರದ ಪಟ್ಟಣಗಳಲ್ಲಿ ವಿದ್ಯಾಭ್ಯಾಸವನ್ನು ಮುಂದುವರೆಸಲು ಹಾಗೂ ಶಾಲೆ ಬಿಡುವುದನ್ನು ತಪ್ಪಿಸಲು 44 ಬಾಲಕಿಯರ ವಸತಿ ನಿಲಯಗಳನ್ನು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಸಲಾಗುತ್ತಿದೆ.

ಚುಕ್ಕಿ ಗುರುತಿಲ್ಲದ ಪ್ರಶ್ನೆ ನಂ. 34ರ ಅನುಬಂಧ

UNITWISE REPORTED AND DISPOSAL OF RAPE CASES FOR THE YEAR-2011

SL. No.	CRIME HEAD	Reported.	FALSE	Tranferred	TRUE	Not investigated	Convicted	Acquitted	Compounded.	Pending Trial	Under Investigation	Untraced	Otherwise Disposed off	Abated
1	BAGALKOT	15	1	0	14	0	0	3	0	11	0	0	0	0
2	BANGALORE CITY	97	5	4	88	0	1	24	1	53	9	0	0	0
3	BANGALORE DIST	29	0	0	29	0	0	2	0	27	0	0	0	0
4	BELGAUM	45	1	0	44	0	0	5	0	35	2	1	0	1
5	BELLARY	6	0	0	6	0	0	0	0	5	0	0	1	0
6	BIDAR	14	0	0	14	0	0	2	0	11	0	0	1	0
7	BIJAPUR	7	0	0	7	0	0	0	0	7	0	0	0	0
8	CHAMARAJANAGAR	11	0	1	10	0	0	3	0	7	0	0	0	0
9	CHIKBALLAPUR	16	0	0	16	0	0	4	0	12	0	0	0	0
10	CHIKKMAGALUR	10	1	1	8	0	1	3	0	3	0	0	1	0

11	CHITRADURGA	27	0	0	27	0	0	1	0	23	3	0	0	0
12	DAKSHINA KANNADA	6	0	0	6	0	2	0	0	2	2	0	0	0
13	DAVA£ÀGERE	11	2	0	9	0	0	0	0	7	2	0	0	0
14	DÀARWAD	0	0	0	0	0	0	0	0	0	0	0	0	0
15	GADAG	5	0	0	5	0	0	3	0	2	0	0	0	0
16	GULBARGA	36	0	0	36	0	0	3	0	19	14	0	0	0
17	HASSAN	27	1	1	25	0	0	4	0	21	0	0	0	0
18	HAVERI	13	1	1	11	0	0	2	0	9	0	0	0	0
19	HUBLI-DARWAD	7	1	0	6	0	1	0	0	5	0	0	0	0
20	KODAGU	16	0	0	16	0	1	0	0	15	0	0	0	0
21	KOLAR	17	0	0	17	0	1	3	0	13	0	0	0	0
22	KOLAR GOLD FIELD	4	0	1	3	0	0	0	0	2	1	0	0	0
23	KOPPAL	13	0	0	13	0	0	0	0	10	3	0	0	0
24	MANDYA	31	2	1	28	0	0	0	0	25	0	3	0	0
25	MANGALORE CITY	16	0	2	14	0	0	0	0	11	2	0	1	0
26	MYSORE	19	1	1	17	0	0	1	0	15	1	0	0	0

27	MYSORE CITY	11	1	0	9	0	0	0	0	9	0	0	0	0
28	RAICHUR	29	0	0	29	0	0	1	0	23	5	0	0	0
29	RAILWAYS	0	0	1	0	0	0	0	0	0	0	0	0	0
30	RAMANAGAR	19	0	0	18	0	0	0	0	16	2	0	0	0
31	SHIMOGA	23	2	0	21	0	1	8	0	12	0	0	0	0
32	TUMKUR	31	0	0	31	0	0	0	0	19	2	0	0	0
33	UDUPI	5	0	0	5	0	0	0	0	3	1	0	1	0
34	UTTARA KANNDA	11	1	1	9	0	0	2	0	6	1	0	0	0
35	YADGIRI	9	2	0	7	0	0	0	0	6	1	0	0	0
	TOTAL	**636**	**22**	**16**	**598**	**0**	**8**	**74**	**1**	**454**	**51**	**4**	**5**	**1**

UNITWISE REPORTED AND DISPOSAL OF RAPE CASES FOR THE YEAR-2012

SL. No.	CRIME HEAD	Reported.	FALSE	Tranferred	TRUE	Not investigated	Convicted	Acquitted	Compounded.	Pending Trial	Under Investigation	Untraced	Otherwise Disposed off
1	BAGALKOT	11	1	0	10	0	0	0	0	5	4	0	1
2	BANGALORE CITY	90	5	3	82	0	0	3	0	64	15	0	0
3	BANGALORE DIST	31	1	0	30	0	0	0	0	19	11	0	0
4	BELGAUM	37	0	0	37	0	0	1	0	24	12	0	0
5	BELLARY	18	0	0	18	0	0	1	0	8	9	0	0
6	BIDAR	11	0	0	11	0	0	0	0	6	4	0	1
7	BIJAPUR	18	3	0	15	0	0	0	0	12	3	0	0
8	CHAMARAJANAGAR	9	0	1	8	0	0	1	0	5	2	0	0
9	CHIKBALLAPUR	12	1	0	11	0	0	0	0	7	4	0	0
10	CHIKKMAGALUR	11	1	0	10	0	0	0	0	7	3	0	0
11	CHITRADURGA	26	0	0	26	0	0	1	0	18	7	0	0
12	DAKSHINA KANNADA	12	0	0	12	0	0	0	0	6	6	0	0

13	DAVANAGERE	17	0	0	17	0	0	0	0	11	6	0	0
14	DJARWAD	5	0	0	5	0	0	0	0	3	2	0	0
15	GADAG	6	0	1	5	0	0	1	0	4	0	0	0
16	GULBARGA	29	0	0	29	0	0	1	0	17	11	0	0
17	HASSAN	21	0	0	21	0	0	0	0	11	10	0	0
18	HAVERI	12	0	0	12	0	0	0	0	6	6	0	0
19	HUBLI-DARWAD	6	1	0	5	0	0	0	0	2	3	0	0
20	KODAGU	12	0	0	12	0	0	0	0	7	5	0	0
21	KOLAR	18	0	0	18	0	0	0	0	12	6	0	0
22	KOLAR GOLD FIELD	10	0	0	10	0	0	0	0	6	4	0	0
23	KOPPAL	7	0	0	7	0	0	0	0	6	1	0	0
24	MANDYA	35	0	1	34	0	0	0	0	24	9	1	0
25	MANGALORE CITY	12	0	0	11	0	0	0	0	8	3	0	0
26	MYSORE	28	0	0	28	0	0	0	0	14	14	0	0
27	MYSORE CITY	12	0	0	12	0	0	0	0	4	8	0	0
28	RAICHUR	19	0	0	19	0	0	6	0	12	1	0	0

29	RAILWAYS	2	0	0	2	0	0	0	0	2	0	0	0
30	RAMANAGAR	16	0	0	16	0	0	0	0	8	8	0	0
31	SHIMOGA	14	0	1	13	0	0	0	0	6	7	0	0
32	TUMKUR	33	1	2	30	0	0	0	0	17	13	0	0
33	UDUPI	5	0	0	5	0	0	0	0	2	3	0	0
34	UTTARA KANNDA	7	1	0	6	0	0	0	0	8	3	0	0
35	YADGIRI	9	1	0	8	0	0	0	0	4	4	0	0
	TOTAL	**621**	**16**	**10**	**595**	**0**	**0**	**15**	**0**	**370**	**207**	**1**	**2**

UNITWISE REPORTED AND DISPOSAL OF MOLESTATION CASES FOR THE YEAR-2011

SL. No.	CRIME HEAD	Reported.	FALSE	Tranferred	TRUE	Not investigated	Convicted	Acquitted	Compounded.	Pending Trial	Under Investigation	Untraced	Otherwise Disposed off
1	BAGALKOT	38	1	0	37	0	0	18	5	14	0	0	0
2	BANGALORE CITY	250	24	2	224	1	0	9	5	176	28	5	0
3	BANGALORE DIST	74	0	0	74	0	1	3	0	69	1	0	0
4	BELGAUM	221	17	0	204	0	0	51	4	146	3	0	0
5	BELLARY	65	0	0	65	0	4	8	0	48	0	2	3
6	BIDAR	27	0	0	27	0	0	3	0	22	1	0	1
7	BIJAPUR	66	2	0	64	0	0	5	0	59	0	0	0
8	CHAMARAJANAGAR	71	0	0	71	0	0	2	0	69	0	0	0
9	CHIKBALLAPUR	55	2	0	53	0	0	13	0	40	0	0	0
10	CHIKKMAGALUR	53	3	0	50	0	0	24	0	23	0	3	0
11	CHITRADURGA	93	0	0	93	0	0	3	2	82	6	0	0
12	DAKSHINA KANNADA	46	0	0	46	0	0	2	0	38	6	0	0

13	DAVANAGERE	65	4	2	59	0	0	9	0	50	0	0	0
14	DJARWAD	21	0	0	21	0	0	0	0	20	1	0	0
15	GADAG	48	3	0	45	0	0	16	0	29	0	0	0
16	GULBARGA	111	0	0	111	0	0	14	2	94	0	0	1
17	HASSAN	106	7	0	99	0	0	1	4	6	86	0	0
18	HAVERI	76	18	0	58	0	0	18	0	35	3	0	0
19	HUBLI-DARWAD	22	5	0	17	0	2	7	1	9	0	0	0
20	KODAGU	25	1	0	24	0	0	0	0	22	1	0	1
21	KOLAR	21	0	0	21	0	0	1	0	14	0	2	4
22	KOLAR GOLD FIELD	14	2	0	12	0	0	2	1	9	0	0	0
23	KOPPAL	23	0	0	23	0	0	0	0	23	0	0	0
24	MANDYA	98	3	0	95	0	0	2	0	93	0	0	0
25	MANGALORE CITY	27	0	0	27	0	0	6	0	17	0	2	2
26	MYSORE	174	0	0	174	0	0	35	0	137	2	0	0
27	MYSORE CITY	23	0	0	23	0	0	0	0	16	7	0	0
28	RAICHUR	149	3	0	146	0	0	3	1	120	22	0	0

29	RAILWAYS	0	0	0	0	0	0	0	0	0	0	0	0
30	RAMANAGAR	101	5	0	95	0	0	2	0	93	0	0	0
31	SHIMOGA	123	5	1	118	0	2	30	1	85	0	0	0
32	TUMKUR	135	3	0	132	0	0	6	3	123	0	0	0
33	UDUPI	45	0	0	45	0	0	3	0	23	16	0	3
34	UTTARA KANNDA	73	9	0	64	0	1	21	0	39	0	0	3
35	YADGIRI	69	0	0	69	0	0	28	0	38	3	0	0
	TOTAL	**2608**	**117**	**5**	**2486**	**1**	**10**	**345**	**29**	**1881**	**186**	**14**	**18**

UNITWISE REPORTED AND DISPOSAL OF MOLESTATION CASES FOR THE YEAR-2012

SL. No.	CRIME HEAD	Reported.	FALSE	Tranferred	TRUE	Not investigated	Convicted	Acquitted	Compounded.	Pending Trial	Under Investigation	Untraced	Otherwise Disposed off
1	BAGALKOT	63	0	0	63	0	0	6	2	46	9	0	0
2	BANGALORE CITY	321	7	1	313	0	0	3	0	73	235	2	0
3	BANGALORE DIST	70	2	0	68	0	0	2	0	47	19	0	0
4	BELGAUM	205	22	0	183	0	0	6	0	115	62	0	0
5	BELLARY	48	0	0	48	0	1	3	0	33	10	0	1
6	BIDAR	40	0	0	40	0	0	0	0	31	8	0	1
7	BIJAPUR	41	0	0	41	0	0	1	0	39	1	0	0
8	CHAMARAJANAGAR	64	0	0	64	0	0	2	0	57	5	0	0
9	CHIKBALLAPUR	56	0	0	56	0	0	0	0	38	18	0	0
10	CHIKKMAGALUR	70	5	0	65	0	0	3	0	44	18	0	0
11	CHITRADURGA	140	1	0	139	0	0	1	1	110	26	1	0
12	DAKSHINA KANNADA	35	0	0	35	0	0	1	0	6	27	0	1

13	DAVANAGERE	117	5	0	112	0	1	0	0	82	29	0	0
14	DJARWAD	38	2	0	36	0	0	0	0	20	16	0	0
15	GADAG	59	5	0	54	0	0	4	0	45	5	0	0
16	GULBARGA	132	0	0	132	0	0	0	0	61	70	0	1
17	HASSAN	120	3	0	117	0	0	1	1	102	13	0	0
18	HAVERI	72	13	0	59	0	0	1	0	28	30	0	0
19	HUBLI-DARWAD	16	1	0	15	0	0	2	0	12	1	0	0
20	KODAGU	25	0	0	25	0	0	0	0	12	13	0	0
21	KOLAR	37	2	0	35	0	0	1	0	24	10	0	0
22	KOLAR GOLD FIELD	10	0	0	10	0	0	0	0	8	1	1	0
23	KOPPAL	17	0	0	17	0	0	0	0	17	0	0	0
24	MANDYA	149	0	0	149	0	0	0	0	70	79	0	0
25	MANGALORE CITY	29	0	0	29	0	0	1	0	16	11	0	1
26	MYSORE	163	4	0	159	0	0	2	0	102	55	0	0
27	MYSORE CITY	22	0	0	22	0	0	0	0	8	14	0	0
28	RAICHUR	141	3	0	138	0	0	16	1	122	0	0	0

29	RAILWAYS	2	0	0	2	0	0	0	0	1	1	0	0
30	RAMANAGAR	112	5	0	107	0	0	0	0	56	49	0	2
31	SHIMOGA	158	5	2	151	0	1	3	10	117	20	0	0
32	TUMKUR	171	9	1	161	0	0	0	3	131	26	0	0
33	UDUPI	41	1	0	40	0	0	1	0	18	18	0	3
34	UTTARA KANNDA	97	2	0	95	0	0	10	0	76	9	0	0
35	YADGIRI	97	0		97	0	0	0	0	78	19	0	0
	TOTAL	**2978**	**97**		**2877**	**0**	**3**	**70**	**18**	**1845**	**927**	**5**	**10**